ಅ.ದಾ. 110/2016

ಡಿಡಬ್ಲ್ಯೂ-2

ದಿನಾಂಕಃ 22.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್.ಡಿ. ವಕೀಲರಿಂದ:**

ನಾನು ವಾಸಿಸುತ್ತಿರುವ ಗ್ರಾಮದಲ್ಲಿ ಅಂದಾಜು 50 ಮನೆಗಳು ಇರಬಹುದು. ನಮ್ಮ ಗ್ರಾಮದಲ್ಲಿ ಜಟ್ಟಿಗ ಎಂಬ ದೇವಸ್ಥಾನ ಇದೆ ಎಂದರೆ ಸರಿ. ಸದರಿ ದೇವಸ್ಥಾನವನ್ನು ನಾರಾಯಣ ಎಂಬುವವರು ಪೂಜೆ ಮಾಡುತ್ತಾರೆ. ಸದರಿ ದೇವಸ್ಥಾನದ ವ್ಯವಸ್ಥೆಯನ್ನು ಅಲ್ಲಿಯ ಪೂಜಾರಿಗಳು ನೋಡಿಕೊಳ್ಳುತ್ತಾರೆ. ನಮ್ಮ ಗ್ರಾಮದಲ್ಲಿ ಗಲಾಟೆಯದ ಪಕ್ಷದಲ್ಲಿ ಅಥವಾ ಆಸ್ತಿ ವಿಚಾರವಾಗಿ ನಮ್ಮ ದೇವಸ್ಥಾನದಲ್ಲಿ ರಾಜಿ ಪಂಚಾಯ್ತಿ ಮಾಡವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ-10 ರಲ್ಲಿರುವ ಸಹಿ ನನ್ನದಾಗಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಬಿ.ಬಿ. ಸಂತೋಷ ಎಂದರೆ ನಾನೇ. ನಿಪಿ-10 ಮತ್ತು ಮುಖ್ಯ ವಿಚಾರಣೆಯಲ್ಲಿರುವ ಸಹಿಗಳು ಒಂದೇ ರೀತಿಯಲ್ಲಿ ಇದೆ ಎಂದರೆ ಸರಿ ಆದರೆ ನಿಪಿ-10 ರಲ್ಲಿರುವ ಸಹಿಯನ್ನು ನಾನು ಮಾಡಿರುವುದಿಲ್ಲ. ಪ್ರತಿವಾದಿಯವರ ಸಹಿಯನ್ನು ನಾನು ನೋಡಿರುವುದಿಲ್ಲ. ಜಟ್ಟಿಗ ದೇವರ ಸಮಿತಿಯಲ್ಲಿ ಪ್ರತ್ಯೇಕವಾದ ಮುದ್ರಣವನ್ನು ಮಾಡಿಸಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಬಿ.ಬಿ. ರವಿ ನನ್ನ ಸಹೋದರ. ಸದರಿಯವರು ಕನ್ನಡ ಭಾಷೆಯಲ್ಲಿ ಸಹಿಯನ್ನು ಮಾಡುತ್ತಾರೆ. ನಿಪಿ-10 ರಲ್ಲಿ ಬಿ.ಬಿ. ಎಂದು ಇರುವ ಸಹಿ ನನ್ನ ಸಹೋದರನ ಸಹಿ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಅವನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

1981 ರಲ್ಲಿ ನನಗೆ ಅಂದಾಜು 8 ವರ್ಷವಾಗಿರಬಹುದು. ಆದ ಕಾರಣ ನನಗೆ ಸದರಿ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಯವರ ನಡುವೆ ಆಗಿರುವ ವ್ಯವಹಾರದ ಕುರಿತು ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಮಟ್ಟಿಗೆ ಇರುತ್ತದೆ ಎಂದು ನುಡಿಯುತ್ತಾರೆ. 1981 ರಲ್ಲಿ ನಾನು 2 ನೇ ತರಗತಿಯನ್ನು ಓದುತ್ತಿದ್ದೆ. 1981 ರಲ್ಲಿ ವಾದಿ ಮತ್ತು ಪ್ರತಿವಾದಿಯವರ ನಡುವೆ ಆಗಿರುವ ವಿಭಾಗಕ್ಕೆ ನಾನು ಹೋಗಿರುತ್ತೇನೆ. ನನ್ನ ನೇತೃತ್ವದಲ್ಲಿ ಪಂಚಾಯ್ತಿಯಾಗಿರುತ್ತದೆ. ರಾಮಯ್ಯ ಎಂಬುವವರು ವಾದಿಯ ಚಿಕ್ಕಪ್ಪ. ಸದರಿಯವರಿಗೆ ಆ ಸಮಯದಲ್ಲಿ 60 ವರ್ಷ ವಯಸ್ಸಾಗಿರಬಹುದು. ಸದರಿ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಯವರ ನಡುವೆ ಬರವಣಿಗೆಯಾಗಿರುವ ಬಗ್ಗೆ ನನಗೆ ನೆನಪಾಗುತ್ತಿಲ್ಲ. ನಾಗಾರಾಜ್ ಎಂಬುವವರಿಗೆ ವಾದಿಯವರು ಸ್ವತ್ತನ್ನು ಮಾರಾಟ ಮಾಡಿ ಎಷ್ಟು ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. 1981 ರಲ್ಲಿ 1 ಎಕರೆ 25 ಗುಂಟೆ ಜಮೀನು ವಾದಿ ಮತ್ತು ಪ್ರತಿವಾದಿಯವರ ಜಂಟಿ ಖಾತೆಯಲ್ಲಿ ಇತ್ತು. ವಾದಿಯವರು ನಾಗಾರಾಜ್ ಎಂಬುವವರಿಂದ ಚೆಕ್ ನ್ನು ಪಡೆದಿರಬಹುದು. ಸದರಿ ಚೆಕ್ ನ ಮೊತ್ತ ನೆನಪಾಗುತ್ತಿಲ್ಲ. ಸದರಿ ಚೆಕ್ ನ್ನು ವಾದಿಯವರು ನಗದೀಕರಿಸಿರುತ್ತಾರೆ. ಸದರಿ ಚೆಕ್ ನ್ನು ಒಟ್ಟು ಕುಟುಂಬದ ಆಸ್ತಿಯನ್ನು ಮಾರಾಟ ಮಾಡಿರುವ ಬಾಬ್ತು ಪಡೆದುಕೊಂಡಿರುತ್ತೇನೆ ಎಂದು ಬರವಣಿಗೆ ಆಗಿರುವುದನ್ನು ನೆನಪಾಗುತ್ತಿಲ್ಲ.

1981 ರಲ್ಲಿ ನಾನು ಅಪ್ರಾಪ್ತ ಬಾಲಕನಾಗಿದ್ದ ಕಾರಣ ನನಗೆ ಪಂಚಾಯ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2015 ರ ಪಂಚಾಯ್ತಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿಯವರು ನನ್ನ ಅಣ್ಣ. ವಾದಿಯವರು ಪ್ರತಿವಾದಿಯವರ ವಿರುದ್ಧ ಯಾವ ಆದೇಶವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ಸ.ನಂ.60/2 ಮತ್ತು 70/3 ರಲ್ಲಿ ಪ್ರತಿವಾದಿಯವರಿಗೆ ಎಷ್ಟು ಜಮೀನನ್ನು ಬಿಟ್ಟಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಅದೇ ರೀತಿ ಸದರಿ ಸ.ನಂ. ನಲ್ಲಿ ವಾದಿಯವರಿಗೆ ಎಷ್ಟು ಜಮೀನು ಇದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ದಿ.28.01.2015 ರಂದು ನಾನು, ತಾರಾನಥ್ ಮತ್ತು ಇತರರು ಸೇರಿ ವಾದಿ ಮತ್ತು ಪ್ರತಿವಾದಿಯವರ ನಡುವೆ ಜಮೀನನ್ನು ವಿಭಾಗ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗಕ್ಕೆ ವಾದಿ ಮತ್ತು ಪ್ರತಿವಾದಿಯವರು ಸಹಿ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಗೆ ಯಾವುದೇ ಜಮೀನನ್ನು ನೀಡಬಾರದು ಎಂಬ ಉದ್ದೇಶದಿಂದ ಪ್ರತಿವಾದಿಯವರೊಟ್ಟಿಗೆ ಸೇರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರಿಗೆ ಈ ಪ್ರಕರಣದಲ್ಲಿ ಪರಿಹಾರವನ್ನು ಕೋರಲು ಯಾವುದೇ ಹಕ್ಕು ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಅ.ದಾ. 110/2016

ಡಿಡಬ್ಲ್ಯೂ-3

ದಿನಾಂಕಃ 22.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್.ಡಿ. ವಕೀಲರಿಂದ:**

ವಾದಿ ಮತ್ತು ಪ್ರತಿವಾದಿಯವರ ನಡುವೆ ಆಗಿರುವ ವಿಭಾಗದ ಕುರಿತು ನನ್ನ ತಂದೆ ನನಗೆ ತಿಳಿಸಿರುತ್ತಾರೆ. ನನ್ನ ತಂದೆಯ ಹೆಸರು ಅಣ್ಣಪ್ಪ. ನನ್ನ ಮುಖ್ಯ ವಿಚಾರಣೆಯಲ್ಲಿ ವಿಭಾಗದ ಕುರಿತು ನನ್ನ ತಂದೆ ತಿಳಿಸಿರುತ್ತಾರೆ ಎಂದು ಹೇಳಿರುತ್ತೇನೆ. ವಾದಿಯು ನನ್ನ ದೊಡ್ಡಪ್ಪ. ಪ್ರತಿವಾದಿಯವರು ಮತ್ತು ನಾವು ಒಳ್ಳೆಯ ಬಾಂದವ್ಯದಲ್ಲಿ ಇರುತ್ತೇವೆ ಎಂದರೆ ಸರಿ. 2015 ನೇ ಸಾಲಿನಲ್ಲಿ ವಾದಿ ಮತ್ತು ಪ್ರತಿವಾದಿಯವರ ನಡುವೆ ಜಟ್ಟಿಗೆ ದೇವಸ್ಥಾನದಲ್ಲಿ ರಾಜಿ ಸಂಧಾನವಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಯವರ ನಡುವೆ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.60, 69 ಮತ್ತು 70 ರ ಜಮೀನಿನ ಬಾಬ್ತು ಆಗಿರುವ ವಿಭಾಗವನ್ನು ನನ್ನ ಸಮಕ್ಷಮ ಬರವಣಿಗೆ ಮಾಡಿರುವುದಿಲ್ಲ. ದಾವಾ ಸ್ವತ್ತುಗಳ ಬಾಬ್ತು 1970-71 ನೇ ಸಾಲಿನಲ್ಲಿ ವಿಭಾಗ ಆಗಿರುತ್ತದೆ. ಸದರಿ ವಿಷಯವನ್ನು ನನ್ನ ತಂದೆ ತಿಳಿಸಿರುತ್ತಾರೆ ಮತ್ತು ಅದರ ಬಾಬ್ತು ಬರವಣಿಗೆ ಆಗಿರುತ್ತದೆ. ಸದರಿ ದಾಖಲಾತಿ ನಿಪಿ-10 ಎಂದರೆ ಸರಿಯಲ್ಲ. 1970 ನೇ ಸಾಲಿನಲ್ಲಿ ವಿಭಾಗ ಆಗಿರುವ ಬಾಬ್ತು ನಾನು ದಾಖಲಾತಿಗಳನ್ನು ನೋಡಿರುತ್ತೇನೆ ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ದಿ.28.01.2015 ರಂದು ವಾದಿ ಮತ್ತು ಪ್ರತಿವಾದಿಯವರ ನಡುವೆ ರಾಜಿ ಸಂದಾನವಾಗಿ ಬರವಣಿಗೆಯಾಗಿರುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ನಾನು ಪ್ರತಿವಾದಿಯವರ ಸಹಿಯನ್ನು ನೋಡಿರುತ್ತೇನೆ ಆದರೆ ವಾದಿಯವರ ಸಹಿಯನ್ನು ನೋಡಿರುವುದಿಲ್ಲ. ಪ್ರತಿವಾದಿಯವರು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ. ನಾನು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನಿಪಿ-10 ರಲ್ಲಿರುವ ಸಹಿ ಪ್ರತಿವಾದಿಯವರ ಸಹಿಯಾಗಿರುವುದಿಲ್ಲ. ವಾದಿಯವರಿಗೆ ಪಾಲನ್ನು ನೀಡಬಾರದು ಎಂದು ಯಾವುದೇ ವಿಚಾರ ತಿಳಿಯದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1981 ರಲ್ಲಿ ನಾನು ಹುಟ್ಟಿರುವುದಿಲ್ಲ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.